ಕಳೆದ ಎರಡು ತಿಂಗಳಿಂದ ಸತತವಾಗಿ ಅವರು ಸರ್ಕಾರಕ್ಕೆ ಪತ್ರ ಬರೆದರೂ ಕೂಡ ಈ ಸರ್ಕಾರ ಅದರ ಬಗ್ಗೆ ಯಾವುದೇ ಚಿಂತನೆಯನ್ನು ಮಾಡಿಲ್ಲ. ತಕ್ಷಣ ಈ ಆದೇಶವನ್ನು ಹಿಂತೆಗೆದುಕೊಳ್ಳಬೇಕು ಮತ್ತು 1984ರಿಂದ 1991ರವರೆಗೆ ಅವರಿಗೆ ಈ ಒಂದು ಬಡ್ತಿಯನ್ನು ಕೊಡುತ್ತೇವೆನ್ನುವ ವಿಚಾರವನ್ನು ಉಲ್ಲೇಖ ಮಾಡಿದ್ದೀರಿ, ಅದನ್ನು ಮತ್ತೆ ಮುಂದುವರೆಸುವುದಕ್ಕೆ ಈ ಆದೇಶವನ್ನು ರದ್ದು ಮಾಡಬೇಕೆಂದು ಸರ್ಕಾರವನ್ನು ಈ ಮೂಲಕ ಆಗ್ರಹಪಡಿಸುತ್ತಿದ್ದೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಸಭಾಧ್ಯಕ್ಷರೆ, 1984ರಿಂದ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಪದವಿಪೂರ್ವ ಕಾಲೇಜು ಹಾಗೂ ಪದವಿ ಕಾಲೇಜುಗಳಲ್ಲಿ ಅರೆಕಾಲಿಕ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಸುಮಾರು ಒಂಬತ್ತು ಸಾವಿರ ಶಿಕ್ಷಕರನ್ನು 1991ರಿಂದ ಖಾಯಂಗೊಳಿಸಿ ಅವರುಗಳಿಗೆ ಪೂರ್ವಾನ್ವಯವಾಗಿ ಬಡ್ತಿ ಮುಂತಾದ ಸೌಲಭ್ಯವನ್ನು ನೀಡಲಾಗಿತ್ತು. ಇಂಥದ್ದೇ ಸೌಲಭ್ಯವನ್ನು ನಮಗೂ ವಿಸ್ತರಿಸುವಂತೆ ನೀರಾವರಿ ಇಲಾಖೆಯ ಅರೆಕಾಲಿಕ ಇಂಜಿನಿಯರ್‌ಗಳು ನ್ಯಾಯಾಲಯಕ್ಕೆ ಹೋಗಿದ್ದು, ನ್ಯಾಯಾಲಯವು, ಸರ್ಕಾರ ಎಲ್ಲಾ ಇಲಾಖೆಯ ಅರೆಕಾಲಿಕ ನೌಕರರನ್ನು ಒಂದೇ ರೀತಿಯಲ್ಲಿ ಪರಿವರ್ತಿಸುವಂತೆ ಆದೇಶಿಸಿದೆ, ಈ ಹಿನ್ನೆಲೆಯಲ್ಲಿ ಸಿಆಸುಇ ಹಾಗೂ ಆರ್ಥಿಕ ಇಲಾಖೆಗಳು ಸರ್ಕಾರಕ್ಕೆ ಬೀಳುವ ಆರ್ಥಿಕ ಹೊರೆಯ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆಗೆ ಮಾತ್ರ ನೀಡಿದ್ದ ಈ ಸೌಲಭ್ಯವನ್ನು ಹಿಂತೆಗೆದುಕೊಂಡು ಕರಡು ಆದೇಶವನ್ನು ಹೊರಡಿಸಿದೆ. ಈ ಬಗ್ಗೆ ಆಕ್ಷೇಪಣೆಯನ್ನು ಕೇಳಿದ್ದು, ಸಾಕಷ್ಟು ಆಕ್ಷೇಪಣೆಗಳು ಬಂದಿವೆ, ಇದನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತರಲಾಗಿದ್ದು ಅವರೂ ಕೂಡ ಈ ಬಗ್ಗೆ ಸಂಬಂಧಿಸಿದ ಇಲಾಖೆಯವರೊಡನೆ ಸಮಾಲೋಚಿಸಿ ಅಂತಿಮ ತೀರ್ಮಾನವನ್ನು ಸದ್ಯದಲ್ಲೇ ತೆಗೆದುಕೊಳ್ಳಲಿದ್ದಾರೆ.

(ಈ) ಅಂತರ್ಜಾತಿ ವಿವಾಹವಾದವರಿಗೆ ಸರ್ಕಾರದ ಪ್ರೋತ್ಸಾಹ.

ಶ್ರೀ ಬಿ.ಮುನಿಯಪ್ಪ (ಗಾಂಧಿನಗರ): ಮಾನ್ಯ ಅಧ್ಯಕ್ಷರೆ, ಸರ್ಕಾರ ಅಂತರ್ಜಾತಿ ವಿವಾಹವಾದವರಿಗೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ಅವರಿಗೆ ಧನಸಹಾಯ ಮಾಡುವಂಥ ಒಂದು ಯೋಜನೆ ಕರ್ನಾಟಕ ಸರ್ಕಾರದಲ್ಲಿದೆಯೇ ಎಂದು ಕೇಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಸಚಿವರು): ಸಭಾಧ್ಯಕ್ಷರೆ, ಇವರು ಈ ವಿಚಾರವನ್ನು ಈಗ ಎತ್ತಿದ್ದಾರೆ, ನಮಗೆ ಒಂದು ಕಾನೂನು ಇದೆ. ಅದರಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಬೇರೆ ಜಾತಿಯವರೊಡನೆ ವಿವಾಹವಾದ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಅವರಿಗೆ ಪ್ರೋತ್ಸಾಹ ಕೊಡುವುದಕ್ಕೆ ನಮ್ಮ ಕಾನೂನಿನಲ್ಲಿ ಅವಕಾಶವಿದೆ. ಬಹುಶಃ ಮಿಕ್ಕ ಜಾತಿಯವರು

ಅಂತರ್ಜಾತಿ ವಿವಾಹವಾದರೆ ಅವರಿಗೂ ಪ್ರೋತ್ಸಾಹ ಕೊಡುವುದಕ್ಕೆ ಅವಕಾಶವಿದೆಯೇ ಎಂದು ಕೇಳುತ್ತಿದ್ದಾರೆ, ಆದರೆ ನಮ್ಮಲ್ಲಿ ಆ ರೀತಿಯ ಕಾನೂನು ಇಲ್ಲ.

1. 10 ಪಿ.ಎಂ.

ಶ್ರೀ ಬಿ.ಮುನಿಯಪ್ಪ: 1983ರಲ್ಲಿ ಮದುವೆಯಾಗಿದ್ದು ಅವರಿಗೆ ಈಗಾಗಲೇ 2-3 ಮಕ್ಕಳಾಗಿವೆ. ಆದರೂ ಅವರಿಗೆ ಸಿಗಬೇಕಾದ ಹಣ ಸಿಕ್ಕಿಲ್ಲ. ಅವರ ಮಕ್ಕಳು ಇವತ್ತು 7ನೇ ತರಗತಿಯಲ್ಲಿ ಓದುತ್ತಿದ್ದಾರೆ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಯಾವುದಾದರೂ ನಿರ್ದಿಷ್ಟವಾಗಿರತಕ್ಕ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ಆ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ.ಮುನಿಯಪ್ಪ: ಬೆಂಗಳೂರಿನಲ್ಲಿ ಆನೇಕಲ್ ತಾಲ್ಲೂಕು, ಬೆಂಗಳೂರು (ಉತ್ತರ), ಬೆಂಗಳೂರು (ದಕ್ಷಿಣ) ಇವುಗಳಿಗೇ 22 ಲಕ್ಷ ರೂ. ಹಣ ಬೇಕು. 1983ರಿಂದ ಇವರಿಗೆ ಹಣ ಸಿಕ್ಕಿಲ್ಲ. ಅವರು ಮಕ್ಕಳು 6ನೇ ಮತ್ತು 7ನೇ ತರಗತಿಗಳಲ್ಲಿ ಓದುತ್ತಿದ್ದಾರೆ. ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸಿ ಈ ಬಗ್ಗೆ ಪರಿಶೀಲನೆ ಮಾಡಿ ಅವರಿಗೆ ಹಣ ಕೊಡಿಸಬೇಕೆಂದು ಕೋರುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ: ಸರ್ಕಾರ ಖಂಡಿತವಾಗಿಯೂ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದೆ. ದಯವಿಟ್ಟು ಮಾನ್ಯ ಸದಸ್ಯರು ನಿರ್ದಿಷ್ಟ ವಾಗಿರತಕ್ಕ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತನ್ನಿ, ಅದಕ್ಕೆ ಕಾನೂನಿನ ಅಡಿಯಲ್ಲಿ ಏನು ಮಾಡಲು ಸಾಧ್ಯವೋ ಅದನ್ನು ಸರ್ಕಾರ ಮಾಡುತ್ತದೆ.

(ಊ) ಪಾರ್ಲಿಮೆಂಟಿನ ವಿಶೇಷ ಅಧಿವೇಶನದ ಲೈವ್ ರಿಲೇ ನೋಡಲು ಸದನಕ್ಕೆ ಬಿಡುವ ನೀಡುವುದು.

+ ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಅಧ್ಯಕ್ಷರೆ, ನಾಳೆಯಿಂದ ನಾಲ್ಕು ದಿವಸ ಪಾರ್ಲಿಮೆಂಟ್‌ನಲ್ಲಿ ಈ ದೇಶ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಇದೊಂದು ವಿಶೇಷ ಅಧಿವೇಶನ ಮತ್ತು ಇದರ ಲೈವ್ ರಿಲೇ ಕೂಡ ಇದೆ. ಇದನ್ನು ನೋಡುವ ಸಲುವಾಗಿ ನಾಲ್ಕು ದಿವಸ ಸದನಕ್ಕೆ ಬಿಡುವು ನೀಡಬೇಕೆಂದು ಕೋರುತ್ತೇನೆ. ವಿಧಾನ ಸಭೆಯಲ್ಲೂ ಕೂಡ ಮೂರು ದಿವಸ ಇಂತಹ ಒಂದು ಚರ್ಚೆಯನ್ನು ನಡೆಸಬೇಕೆಂದು ತಾವು ಮಾಡಿದ್ದೀರಿ. ಪಾರ್ಲಿಮೆಂಟ್‌ನಲ್ಲಿ ನಡೆಯುವ ಚರ್ಚೆಯನ್ನು ಕೇಳಿ ನಮ್ಮ ಅಭಿಪ್ರಾಯಗಳನ್ನು ಸರಿಯಾಗಿ ಮಂಡನೆ ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಇದೊಂದು ಒಳ್ಳೆಯ ಸಲಹೆ.